# ಶ್ರೀಮಾತೆ ಶಾರದಾದೇವಿ :
# ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರ ದೃಷ್ಟಿಯಲ್ಲಿ

ವಿ. ಮೀನಾ

ಶ್ರೀಮಾತೆಯನ್ನು ಬಹಳ ಶ್ರದ್ಧೆಯಿಂದ ಕಾಣುತ್ತಿದ್ದ ಶ್ರೀರಾಮಕೃಷ್ಣರ ನೇರ ಶಿಷ್ಯರೆಲ್ಲ ಅವರ ಬಗ್ಗೆ ಅನೇಕ ಕಡೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಶ್ರೀರಾಮಕೃಷ್ಣರಿಗೆ ಸಮಾನವಾಗಿ ಆರಾಧಿಸಲ್ಪಡುವ ಶ್ರೀಮಾತೆಯ ಅದ್ಭುತ ವ್ಯಕ್ತಿತ್ವವನ್ನು ಈ ಲೇಖನ ಪರಿಚಯಿಸುತ್ತದೆ. ಲೇಖಕಿ ಬೆಂಗಳೂರಿನ ನಿವಾಸಿ.

ಅವತಾರ ಪುರುಷರ ಸ್ವರೂಪವು ಸಾಧಾರಣ ಮಾನವನ ಬುದ್ಧಿಗೆ ನಿಲುಕುವಂತಹುದಲ್ಲ. ಅವರೊಂದಿಗೆ ಲೀಲೆಯಲ್ಲಿ ಸಹಕರಿಸಲು ಬರುವವರು ಮಾತ್ರ ಅವರನ್ನು ತಿಳಿದಿರುತ್ತಾರೆ ಅಥವಾ ಅವರು ತಮ್ಮ ಲೀಲಾಸಹಚರರ ಕೈಗೆ ಎಟುಕುತ್ತಾರೆ ಎನ್ನಬಹುದು. ಒಮ್ಮೆ ನೋಡುವುದರಿಂದ ಮಾತ್ರ ಅವರನ್ನು ತಿಳಿಯುವುದು ಸಾಧ್ಯವಾಗದು. ಇದನ್ನು ನಾವು ಶ್ರೀರಾಮ ಕೃಷ್ಣರ ಜೀವನದಲ್ಲೂ ನೋಡುತ್ತೇವೆ. ಶ್ರೀರಾಮಕೃಷ್ಣರು ತಮ್ಮ ದಿವ್ಯಸ್ವರೂಪವನ್ನು ತಮ್ಮ ಅಂತರಂಗ ಶಿಷ್ಯರ ಮುಂದೆ ಕ್ರಮೇಣ ವ್ಯಕ್ತಪಡಿಸಿ, ತಮ್ಮ ದಿವ್ಯಲೀಲಾಸಂಗಿನಿ ಶ್ರೀಶಾರದಾ ದೇವಿ ಯವರ ದೈವೀಸ್ವರೂಪವನ್ನೂ ತಮ್ಮ ಶಿಷ್ಯರಿಗೆ ತಿಳಿಯ ಪಡಿಸಿದ್ದಾರೆ. ಇದನ್ನು ಶ್ರೀರಾಮಕೃಷ್ಣರೇ ಮಾಡಿರದಿದ್ದರೆ ಶ್ರೀಮಾತೆಯವರು ಯಾರೆಂಬುದು ಬಹುಶಃ ಅವರ ತ್ಯಾಗೀ ಭಕ್ತರ ಅರಿವಿಗೂ ಬರುತ್ತಿರಲಿಲ್ಲವೇನೋ! ಏಕೆಂದರೆ ಒಳಗೆ ಹುದುಗಿದ್ದ ಶ್ರೀಮಾತೆಯವರ ಅಸಾಧಾರಣತ್ವ ಯಾವ ರೀತಿಯಲ್ಲೂ ಪ್ರಕಾಶವಾಗಿರಲಿಲ್ಲ. ಶ್ರೀರಾಮಕೃಷ್ಣರು ಪುರುಷ, ಹಾಗೂ ಶ್ರೀಮಾತೆಯವರು ಪರಮಾ ಪ್ರಕೃತಿ, ಸಾಕ್ಷಾತ್ ಆದ್ಯಾಶಕ್ತಿಸ್ವರೂಪಿಣಿ ಎಂದು ಅಂತರಂಗಭಕ್ತರ ಅರಿವಿಗೆ ಬಂದದ್ದು ಶ್ರೀರಾಮಕೃಷ್ಣರ ಅಂತ್ಯಕಾಲದಲ್ಲೇ. ಕಾಶೀಪುರ ತೋಟದಲ್ಲಿ ಒಮ್ಮೆ ಶ್ರೀರಾಮಕೃಷ್ಣರ ತ್ಯಾಗೀ ಸಂತಾನರು (ನರೇಂದ್ರಾದಿಗಳು) ಭಿಕ್ಷೆಯನ್ನು ತರುವುದಕ್ಕಾಗಿ ಹೊರಗೆ ಹೊರಟದ್ದಾಗ ಪ್ರಪ್ರಥಮವಾಗಿ ಶ್ರೀಮಾತೆಯವರ ಬಳಿಗೇ ಬಂದು ಹೀಗೆ ಸ್ತೋತ್ರ ಮಾಡುತ್ತಾರೆ, **ಅನ್ನಪೂರ್ಣೇ ಸದಾಪೂರ್ಣೇ ಶಂಕರಪ್ರಾಣವಲ್ಲಭೇ। ಜ್ಞಾನವೈರಾಗ್ಯ ಸಿದ್ಧ್ಯರ್ಥಂ ಭಿಕ್ಷಾಂ ದೇಹಿ ಚ ಪಾರ್ವತೀ ॥** ಅವರೆಲ್ಲ ಶ್ರೀಮಾತೆಯವರಿಗೆ ನಮಸ್ಕರಿಸಿ ಅವರ ಆಶೀರ್ವಾದ ಪಡೆದು ಮುಂದೆ ನಡೆದರು. ಅವರು ಶ್ರೀಮಾತೆಯವರನ್ನು ಸ್ತೋತ್ರ ಮಾಡಿದ ರೀತಿಯನ್ನು ನಾವಿಲ್ಲಿ ವಿಶೇಷವಾಗಿ ಗಮನಿಸಬೇಕು. ಇದಕ್ಕೆ ಸ್ವಲ್ಪ ಕಾಲದ ನಂತರ ಕಾಳಿಪ್ರಸಾದ (ಸ್ವಾಮಿ ಅಭೇದಾನಂದ) ಶ್ರೀಮಾತೆಯ ಕುರಿತು ಅತ್ಯಂತ ಸುಂದರ ವಾದ **ಪ್ರಕೃತಿಂ ಪರಮಾಂ** ಎಂಬ ಸ್ತೋತ್ರವನ್ನೂ ರಚಿಸಿದರು. ಅಲ್ಲಿಯೂ ಸಹ ಅವರು ಶ್ರೀಮಾತೆಯವರನ್ನು ಆದ್ಯಾಶಕ್ತಿ, ಜಗಜ್ಜನನಿ ಎಂದು ಸ್ತುತಿಸಿ ವಂದಿಸಿದ್ದಾರೆ. ಇವು ಅವರೆಲ್ಲರ ಅಂತರಂಗದ ಭಾವನೆಗಳ ವ್ಯಕ್ತರೂಪ ಮಾತ್ರ. ಶ್ರೀರಾಮಕೃಷ್ಣರ ಹತ್ತು ಜನ ಸನ್ಯಾಸಿ ಶಿಷ್ಯರ ದೃಷ್ಟಿಯಲ್ಲಿ ಶ್ರೀಮಾತೆ ಹೇಗೆ ಕಂಡು ಬಂದರು ಎಂಬುದನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

**ಸ್ವಾಮಿ ಶಿವಾನಂದರು** : ಶ್ರೀದುರ್ಗಾಪೂಜೆಯು ಬೇಲೂರು ಮಠದಲ್ಲಿ ಪ್ರಾರಂಭವಾದಾಗ ಶ್ರೀರಾಮಕೃಷ್ಣರ ನೇರಶಿಷ್ಯರೆಲ್ಲ ಶ್ರೀಮಾತೆಯವರು ಬಂದು ಆ ಪೂಜೆಯಲ್ಲಿ ಭಾಗವಹಿಸ ಬೇಕೆಂದು ಬಹಳ ಬಯಸಿದ್ದರು. ಅವರೆಲ್ಲ ಶ್ರೀಮಾತೆಯವ ರನ್ನು ಸಾಕ್ಷಾತ್ 'ಜಗದಂಬೆ' ಎಂದೇ ತಿಳಿದಿದ್ದರು. ಶ್ರೀಮಾತೆ ಯವರು ದುರ್ಗಾಪೂಜೆಯ ಸಮಯದಲ್ಲಿ ಮಠಕ್ಕೆ ಬಂದು ತಮ್ಮ ದಿವ್ಯಸಾನ್ನಿಧ್ಯ ಕರುಣಿಸಿದರೆ ಅವರ ಆನಂದಕ್ಕೆ ಪಾರವೇ ಇರುತ್ತಿರಲಿಲ್ಲ. ೧೯೧೬ರಲ್ಲಿ ನಡೆದ ದುರ್ಗಾಪೂಜೆಯ ಒಂದು ಚಿತ್ರಣವನ್ನು ಸ್ವಾಮಿ ತುರೀಯಾನಂದರಿಗೆ ಬರೆದ ಪತ್ರ ವೊಂದರಲ್ಲಿ ಸ್ವಾಮಿ ಶಿವಾನಂದರು ನೀಡಿದ್ದಾರೆ: "ನೋಡು ಹರಿ, ಶ್ರೀಮಾತೆಯವರ ಸನ್ನಿಧಿಯಲ್ಲಿ ಪೂಜೆಯೆಲ್ಲ ಬಹಳ ಸಾಂಗವಾಗಿ ನಡೆದುಹೋಯಿತು. ಕಾಶಿಯ ಅದ್ವೈತ ಆಶ್ರಮ ದಲ್ಲಿಯೂ ಪ್ರತಿಮೆಯಲ್ಲಿ ಕಾಳಿ ಹಾಗೂ ಜಗದ್ಧಾತ್ರಿ ಪೂಜೆ ಆನಂದದಿಂದ ನೆರವೇರಿತು. ಶ್ರೀಮಾತೆಯವರು ಇಲ್ಲೇ ಒಂದು ಹತ್ತಿರದ ಮನೆಯಲ್ಲಿ ವಾಸವಾಗಿದ್ದು, ಪೂಜೆಯ ಸಮಯಕ್ಕೆ ಬಂದು ಪುಷ್ಪಾಂಜಲಿ ಸಮರ್ಪಿಸಿ ಹೊರಟುಹೋಗುತ್ತಿದ್ದರು. ಇದರಿಂದಾಗಿ ಪ್ರತಿಮೆ ಜೀವಂತವಾಗಿ ಇರುವಂತೆ ತೋರು ತ್ತಿತ್ತು, ಹಾಗೂ ಭಕ್ತರ ಹೃದಯದಲ್ಲಿ ಉತ್ಸಾಹ, ಆನಂದಗಳ ಸ್ರೋತವೇ ಹರಿಯುತ್ತಿತ್ತು."

ಒಬ್ಬ ಭಕ್ತ ದುರ್ಗಾಪೂಜೆಯ ಸಮಯದಲ್ಲಿ ದುರ್ಗೆಯ ಬದಲು ಶ್ರೀಮಾತೆಯವರ ಭಾವಚಿತ್ರವನ್ನಿಟ್ಟು ಪೂಜೆ ಮಾಡಿದ ನೆಂದು ತಿಳಿದು ಅವನಿಗೆ ಪತ್ರ ಬರೆಯುತ್ತ ಶಿವಾನಂದರು ಹೇಳುತ್ತಾರೆ, "ಶ್ರೀಮಾತೆಯವರ ಪೂಜೆ ಮಾಡಿದೆ ಎಂಬ ವಿಚಾರ ತಿಳಿದು ಬಹಳ ಸಂತೋಷವಾಯಿತು. ನಿನ್ನ ಜೀವನ ನಿಜವಾಗಿಯೂ ಧನ್ಯವಾಗಿ ಹೋಯಿತು."

ಶ್ರೀಮಾತೆಯವರ ಮಾತು, ತೀರ್ಮಾನವೇ ಈ ಅಂತ ರಂಗ ಶಿಷ್ಯರ ಪಾಲಿಗೆ ಕೊನೆಯ ಮಾತು. ಒಮ್ಮೆ ಒಬ್ಬ ಬ್ರಹ್ಮಚಾರಿಯನ್ನು ಅವನ ಒಂದು ತಪ್ಪಿಗಾಗಿ ಮಠದಿಂದ ಹೊರಗೆ ಹಾಕಿದರು. ಆ ಬ್ರಹ್ಮಚಾರಿಯು ಉಟ್ಟ ಬಟ್ಟೆಯಲ್ಲಿ

ಜಯರಾಂಬಾಟಿಗೆ ಹೋಗಿ ಅಲ್ಲಿ ಶ್ರೀಮಾತೆಯವರಲ್ಲಿ ಶರಣಾಗತನಾದ. ತಾಯಿಯು ಶಿವಾನಂದರಿಗೆ ಪತ್ರ ಬರೆದು, "ಅಪ್ಪಾ, ತಾರಕ್, ಈ ಬ್ರಹ್ಮಚಾರಿಯನ್ನು ಮತ್ತೆ ಮಠಕ್ಕೆ ಸೇರಿಸಿಕೊ. ನಾನು ತಾಯಿ. ಮಕ್ಕಳ ತಪ್ಪನ್ನು ನೋಡಲಾರೆ" ಎಂದು ತಿಳಿಸಿದರು. ತಕ್ಷಣ ಶಿವಾನಂದರು ಆ ಬ್ರಹ್ಮಚಾರಿಯನ್ನು ಕರೆಸಿಕೊಂಡು, "ನನ್ನ ವಿರುದ್ಧ ಮೊಕದ್ದಮೆ ಹೂಡಲು ಹೈಕೋರ್ಟಿಗೆ ಹೋದೆಯಾ?" ಎಂದು ನಗುತ್ತ ಆತನನ್ನು ಆಲಿಂಗಿಸಿದರು. ಶ್ರೀಮಾತೆಯವರಿಂದ ದೀಕ್ಷೆ ಪಡೆದವರನ್ನು ಶಿವಾನಂದರು ಅತ್ಯಂತ ಆತ್ಮೀಯವಾಗಿ ಕಾಣುತ್ತಿದ್ದರು. ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: "ಶ್ರೀಮಾತೆಯವರು ಸಾಕ್ಷಾತ್ ಜಗಜ್ಜನನಿ, ಆದ್ಯಾಶಕ್ತಿ. ಶಾಸ್ತ್ರಗಳಲ್ಲಿ ಯಾರನ್ನು ಕಾಳಿ, ತಾರಾ, ಷೋಡಶೀ ಮಹಾವಿದ್ಯೆಯೆಂದು ಹೇಳಿದೆಯೋ, ಆ ಮಹಾ ವಿದ್ಯೆಯ ರೂಪಗಳಲ್ಲಿ ನಮ್ಮ ಶ್ರೀಮಾತೆಯವರೂ ಒಬ್ಬರು. ಅವರನ್ನು ಸಾಧಾರಣ ಮಾನವರು ಹೇಗೆ ತಿಳಿಯುತ್ತಾರೆ? ಅವರು ಶ್ರೀರಾಮಕೃಷ್ಣರ ಲೀಲೆಯನ್ನು ಪೂರ್ಣಗೊಳಿಸು ವುದಕ್ಕಾಗಿ ಅವತಾರ ಎತ್ತಿದ್ದಾರೆ. ಶ್ರೀಮಾತೆಯವರು ತಮ್ಮ ದೈವೀ ಭಾವವನ್ನು ಎಷ್ಟು ಗೋಪ್ಯವಾಗಿ ಇಡುತ್ತಿದ್ದರು! ಶ್ರೀರಾಮಕೃಷ್ಣರು ಒಬ್ಬರೇ ಅವರನ್ನು ಅರಿತಿದ್ದರು. ಸ್ವಾಮಿ ವಿವೇಕಾನಂದರು ಸ್ವಲ್ಪ ಮಾತ್ರ ಅರಿತಿದ್ದರು ಅಷ್ಟೇ."

ಶ್ರೀಮಾತೆಯವರ ಒಂದು ಜನ್ಮದಿನದಂದು ಮಹಾಪುರುಷಜಿ ಭಾವುಕರಾಗಿ ಹೇಳಿದರು: "ಸ್ವಯಂ ಮಹಾಮಾಯೆಯ ಜನ್ಮದಿನ! ಅವರೇ ಕೃಪೆ ಮಾಡಿ ತಿಳಿಸದಿದ್ದರೆ ಅರಿಯುವುದೆಂತು? ಅವರ ಹೆಸರು ಸಾರದಾ—ಸ್ವಯಂ ಸರಸ್ವತಿ. ಈಕೆಯೇ ನಮಗೆ ಜ್ಞಾನವನ್ನು ದಯಪಾಲಿಸಬೇಕು." ಒಮ್ಮೆ ಒಬ್ಬ ಬ್ರಹ್ಮಚಾರಿಗೆ, "ಶ್ರೀಮಾತೆಯವರು ಸಾಕ್ಷಾತ್ ಸರಸ್ವತಿ. ಆಕೆಯ ಕೃಪೆಯಿಂದಲೇ ನಮ್ಮ ಬೇಲೂರು ಮಠದಲ್ಲಿ ಪ್ರತಿ ದಿನ ಆಕೆಯ ಪೂಜೆ ನಡೆಯುತ್ತಿದೆ. ಆಕೆ ಕೃಪೆಮಾಡಿ ಎಲ್ಲರ ಅಜ್ಞಾನವನ್ನೂ ದೂರಮಾಡುತ್ತಾಳೆ. ಜಯ್ ಮಾ! ಜಯ್ ಮಾ!" ಎಂದು ತಮ್ಮೆರಡು ಕೈಗಳನ್ನೂ ಜೋಡಿಸಿ ಶ್ರೀಮಾತೆಯವರಿಗೆ ನಮಸ್ಕರಿಸಿದರು.

ಶ್ರೀಮಾತೆಯವರು ತಮ್ಮ ನರಲೀಲೆಯನ್ನು ಅಂತ್ಯಗೊಳಿಸಿದ ಕೆಲವು ದಿನಗಳಲ್ಲಿ ಭಕ್ತ ದಂಪತಿಗಳಿಬ್ಬರು ಬಂದು ಶಿವಾನಂದರ ಬಳಿ ದುಃಖಿಸಿದರು. ಅವರನ್ನು ಸಮಾಧಾನ ಪಡಿಸುತ್ತ ಅವರು ಸ್ಫೂರ್ತಿಯುತರಾಗಿ ಹೇಳಿದರು: "ಶ್ರೀಮಾತೆಯವರು ಈಗ ಸರ್ವವ್ಯಾಪಿನಿಯಾಗಿದ್ದಾರೆ. ಎಲ್ಲರ ಮಧ್ಯದಲ್ಲೂ, ಎಲ್ಲ ಜಾಗಗಳಲ್ಲೂ ಆಕೆ ವ್ಯಕ್ತವಾಗುತ್ತಾರೆ: ಯಾರು ಭಕ್ತಿಯಿಂದ ಕರೆಯುತ್ತಾರೋ ಅವರಿಗೆ ದರ್ಶನವೀಯುತ್ತಾರೆ. ನೀವು ಅವರಿಗಾಗಿ ಎಷ್ಟು ದುಃಖಿಸಿದರೂ ಅಷ್ಟೂ ಒಳ್ಳೆಯದೇ. ಇದರಿಂದ ಮನಕರಗಿ ಬಂದು ದರ್ಶನವೀಯುತ್ತಾರೆ. ಏಕೆಂದರೆ ಅವರು ಸಾಧಾರಣ ಮಾನವರಲ್ಲ. ಸಾಧಕರೂ ಅಲ್ಲ, ಸಾಮಾನ್ಯ ಸಿದ್ಧರೂ ಅಲ್ಲ. ಅವರು ನಿತ್ಯಸಿದ್ಧರು! ಅವರು ಅದೇ ಆದ್ಯಾಶಕ್ತಿಯ ಒಂದು ಪ್ರಕಾಶ. ತಾರಾ, ಕಾಳಿ, ಭುವನೇಶ್ವರಿ ಮುಂತಾದ ರೂಪಗಳಂತೆ ಧರ್ಮಸಂಸ್ಥಾಪನೆಯ ಕಾರ್ಯಕ್ಕಾಗಿ ಅತ್ಯಂತ ಗೋಪ್ಯವಾಗಿ, ಬಡವರಾದ ತಂದೆ ತಾಯಿಯರ ಗರ್ಭದಲ್ಲಿ ಅತ್ಯಂತ ದೀನಭಾವದಲ್ಲಿ ಅವತರಿಸಿದ್ದಾರೆ. ವಂಗದೇಶದ ಒಂದು ಕುಗ್ರಾಮದಲ್ಲಿ ಜನಿಸಿ ಜೀವಕೋಟಿಯ ಐಹಿಕ ಹಾಗೂ ಆಧ್ಯಾತ್ಮಿಕ ಒಳಿತಿಗಾಗಿ, ಕಲ್ಯಾಣಕ್ಕಾಗಿ ಕಾರ್ಯತತ್ಪರರಾಗಿದ್ದಾರೆ. ಅವರ ಕೃಪೆಯಿಂದ ಕುಂಡಲಿನೀ ಶಕ್ತಿ ಜಾಗೃತವಾಗುತ್ತದೆ. ಅವರ ಕೃಪೆಗೆ ಪಾತ್ರರಾದವರೇ ಧನ್ಯರು." ಇನ್ನೊಂದು ಕಡೆ ಅವರು ಹೇಳುತ್ತಾರೆ, "ಸತಿಯ ಶರೀರದ ಒಂದೊಂದು ಭಾಗವನ್ನು ಪಡೆದ ಒಂದೊಂದು ಸ್ಥಳವೂ ತೀರ್ಥಸ್ಥಾನವಾಯಿತು; ಪೀಠಸ್ಥಾನವಾಯಿತು. ಅಂತಹ ಸತಿಯ ಇಡೀ ಶರೀರವೇ ಈ ಬೇಲೂರು ಮಠದ ಭೂಮಿಯಲ್ಲಿ ಒಂದಾಗಿದೆ. ಇದು ಎಂತಹ ಮಹಾಪೀಠವೆಂದು ಇದರಿಂದ ತಿಳಿದುಕೊಳ್ಳಿ." ಇನ್ನೊಮ್ಮೆ ಅವರು ಹೇಳುತ್ತಾರೆ, "ಶ್ರೀಮಾತೆಯವರು ಈ ಯುಗದ ಸಮಗ್ರ ನಾರೀಜಾತಿಯ ಆದರ್ಶವಾಗಿದ್ದಾರೆ. ಇದರಿಂದಾಗಿಯೆ ನಾರಿಯರೆಲ್ಲಾ ಹೇಗೆ ಜಾಗೃತರಾಗುತ್ತಿದ್ದಾರೆ, ನೋಡಿದೆಯಾ? ಇದೇನು ಮುಗಿಯಿತೇ? ಇದು ಇನ್ನೂ ಪ್ರಾರಂಭ. ಆಗುವುದು ಬೇಕಾದಷ್ಟಿದೆ."

**ಸ್ವಾಮಿ ಅಖಂಡಾನಂದರು :** ಸ್ವಾಮಿ ಅಖಂಡಾನಂದರ ಅಂತರಂಗ ಭಕ್ತರು ಅವರನ್ನು ಶ್ರೀಮಾತೆಯವರ ವಿಚಾರವಾಗಿ ಏನಾದರೂ ಹೇಳಿ ಎಂದು ಪೀಡಿಸಿದರೆ ಕೆಲವೊಮ್ಮೆ ಅವರ ಬಗ್ಗೆ ಹೇಳುತ್ತಿದ್ದರು. ಆದರೆ ಅನೇಕ ವೇಳೆ ಮೌನವಾಗಿಯೇ ಇದ್ದುಬಿಡುತ್ತಿದ್ದರು. ಒಮ್ಮೆ ಹೀಗೆ ಹೇಳುತ್ತಾರೆ, "ಶ್ರೀಮಾತೆಯವರು ಸ್ವಯಂ ಅನ್ನಪೂರ್ಣೆ, ವಿಶ್ವೇಶ್ವರೀ, ಜಗದ್ಧಾತ್ರೀ, ವೈಕುಂಠದ ಲಕ್ಷ್ಮಿ. ಸಾಕ್ಷಾತ್ ಭಗವಂತನೇ ಈ ಬಾರಿ ಶ್ರೀರಾಮಕೃಷ್ಣರೂಪದಲ್ಲಿ ಅವತರಿಸಿದ್ದಾನೆ ಹಾಗೂ ಸ್ವಯಂ ಭಗವತಿಯೇ ನಮ್ಮ ತಾಯಿಯಾಗಿ ಆಗಮಿಸಿದ್ದಾಳೆ. ಭಗವಂತ ಹಾಗೂ ಭಗವತಿ ಒಡಗೂಡಿಯೇ ಈ ಬಂಧುರ ಅವತಾರ ಲೀಲೆ! ನೋಡಿದೆಯಾ, ಹಿಂದೆ ಎಷ್ಟು ಬಾರಿ ಭಗವಂತ ಅವತರಿಸಿದ್ದನೋ, ಶ್ರೀರಾಮಚಂದ್ರನಿಂದ ಹಿಡಿದು ಚೈತನ್ಯರವರೆಗೂ, ಅಷ್ಟು ಬಾರಿಯೂ ಭಗವತಿಯೂ ಸಹ ಬರಬೇಕಾಯಿತು. ಸೀತಾ ಎನ್ನು, ರಾಧಾ ಎನ್ನು, ಯಶೋಧರಾ, ವಿಷ್ಣುಪ್ರಿಯಾ ಎಲ್ಲರೂ ನಮ್ಮ ತಾಯಿಯೇ ಆಗಿದ್ದಾರೆ. ಶ್ರೀಮಾತೆಯವರ ಸ್ವರೂಪದ ಬಗೆಗೆ ಶ್ರೀರಾಮಕೃಷ್ಣರು ತ್ರಿಗುಣಾತೀತಾನಂದರಿಗೆ ಹೇಳಿದ್ದರು, 'ರಾಧೆಯ ಮಾಯೆ ಅನಂತವಾಗಿದೆ, ಕೋಟಿ ರಾಮರು ಕೋಟಿ ಕೃಷ್ಣರು ಆಗಿಹೋಗಿದ್ದಾರೆ.'"

ಅಖಂಡಾನಂದಜಿ ಅಂತರಂಗದ ಭಕ್ತಿಯಿಂದ ಹಾಗೂ ಪ್ರೇಮದಿಂದ ಶ್ರೀಮಾತೆಯವರ ಪೂಜೆ ಮಾಡುತ್ತಿದ್ದರು. ಅದೊಂದು ಭಾವಮಯ ಪೂಜೆಯಾಗಿತ್ತು. ಅವರು ಹೇಳುತ್ತಿದ್ದರು, "ಪೂಜೆ ಎಂದರೇನು? ಅತ್ಯಂತ ಪ್ರೀತಿಯಿಂದ 'ಅಮ್ಮಾ ಬಾ, ತಿನ್ನು, ನಿನ್ನ ಪದಾರ್ಥಗಳನ್ನು ನಿನಗೇ ಕೊಡುತ್ತಿದ್ದೇನೆ. ಎಷ್ಟು ಜನರು ಒಳ್ಳೆಯ ಪದಾರ್ಥಗಳನ್ನು ನಿನಗೆ ಕೊಡುತ್ತಾರೆ. ನನಗೆ ಇಷ್ಟು ಮಾತ್ರ ಸಿಕ್ಕಿದೆ. ಇದನ್ನೇ ಕರುಣೆಯಿಂದ ಸ್ವೀಕರಿಸಮ್ಮಾ' ಎಂದು ಅಳುತ್ತಾ ಪ್ರಾರ್ಥನೆ ಮಾಡುವುದು ಹಾಗೂ ಮನಸ್ಸಿನಲ್ಲಿ ಭಾವಿಸುವುದು. ಅವರು ಇದನ್ನೆಲ್ಲಾ ಸ್ವೀಕರಿಸುತ್ತಿದ್ದಾರೆ ಎಂದು ಹೋಮ ಮಾಡುವಾಗ ಸರ್ವಸ್ವವನ್ನೂ ತ್ಯಾಗ ಮಾಡಿ ಆಹುತಿ ನೀಡು. ಕೇವಲ ೧೦೮ ಬಿಲ್ವ ಪತ್ರೆಗಳನ್ನು ಅವರ ಹೆಸರಿನಲ್ಲಿ ಹಾಕುವುದಲ್ಲ. ಇಡೀ ದಿನ ಪೂಜೆ ಮಾಡುತ್ತಿರುವುದು; ಇತ್ತ ಕಡೆ, ಅವರ ಮಕ್ಕಳು ಹಸಿದುಕೊಂಡಿರುವುದು, ಇದು ಸರಿಯಲ್ಲ. ಇಂತಹ ಪೂಜೆ ನಮ್ಮ ತಾಯಿಗೆ ರುಚಿಸದು."

ಸ್ವಾಮಿ ವಿವೇಕಾನಂದರಿಂದ ಜೀವನಲ್ಲಿ ಶಿವನನ್ನು ಕಂಡು ಅವನಿಗೆ ಸೇವೆ ಮಾಡುವ ವ್ರತವನ್ನು ಕೈಗೊಂಡ ಅಖಂಡಾನಂದರು ಅತೀವ ಪರಿಶ್ರಮದ ಕಾರಣ ಅನಾರೋಗ್ಯಕ್ಕೆ ಗುರಿಯಾದಾಗ ಶ್ರೀಮಾತೆಯವರು ಅವರನ್ನು ಕರೆಯಿಸಿಕೊಂಡು ಚಿಕಿತ್ಸೆ ಹಾಗೂ ವಿಶ್ರಾಂತಿಯನ್ನು ತೆಗೆದುಕೊಳ್ಳುವಂತೆ ಹೇಳಿದರು. ಸ್ವಾಮಿಗಳು ತಕ್ಷಣವೇ ಮಗುವಿನಂತೆ ಅವರ ಮಾತನ್ನು ಶಿರಸಾ ವಹಿಸಿದರು.

ಶ್ರೀಮಾತೆಯವರೇ ಈ ಯುಗದ ನಾರಿಯರಿಗೆ ಆದರ್ಶ ಹಾಗೂ ನಾರಿಯರು ಶ್ರೀಮಾತೆಯವರನ್ನು ಆದರ್ಶವಾಗಿಟ್ಟುಕೊಂಡು ಜೀವನ ನಡೆಸುವಂತೆ ಅಖಂಡಾನಂದಜಿ ದೃಢ ವಿಶ್ವಾಸದಿಂದ ಸಲಹೆ ನೀಡುತ್ತಿದ್ದರು.

**ಸ್ವಾಮಿ ವಿಜ್ಞಾನಾನಂದರು** ಸ್ವಾಮಿ ವಿಜ್ಞಾನಾನಂದರು ಶ್ರೀಮಾತೆಯವರ ಪ್ರಥಮ ದರ್ಶನದಂದು ತಮಗಾದ ಅನುಭವದ ಬಗ್ಗೆ ಹೀಗೆ ಹೇಳುತ್ತಾರೆ : 'ನಾನು ಅದುವರೆಗೂ ಅವರನ್ನು ನೋಡಿರಲಿಲ್ಲ. ಅವರ ದರ್ಶನ ಪಡೆಯಲು ಹೋಗಿದ್ದೆ. ಶ್ರೀಮಾತೆಯವರು ಮೇಲಿನ ಕೋಣೆಯಲ್ಲಿದ್ದರು, ನಾನು ಕೆಳಗೆ ಇದ್ದೆ. ಆಗ ನನ್ನ ಹೃದಯಪದ್ಮ ಅರಳಲಾರಂಭಿಸಿದ್ದನ್ನು ಅನುಭವಿಸಿದೆ." ಇನ್ನೊಮ್ಮೆ ಸ್ವಾಮಿ ವಿವೇಕಾನಂದರೇ ವಿಜ್ಞಾನಾನಂದರಿಗೆ ಹೇಳುತ್ತಾರೆ: 'ನೋಡು ಶ್ರೀಮಾತೆಯವರು ಸಾಕ್ಷಾತ್ ಜಗಜ್ಜನನಿ. ಅವರಿಗೆ ಸರಿಯಾಗಿ ಪ್ರಣಾಮ ಮಾಡು" ಎಂದು. ಮುಂದೆ ಅಲಹಾಬಾದಿನಲ್ಲಿ ಓರ್ವ ಭಕ್ತ ನೊಡನೆ ಸಂಭಾಷಿಸುತ್ತ ವಿಜ್ಞಾನಾನಂದಜಿ ಹೇಳುತ್ತಾರೆ : "ಶ್ರೀಮಾತೆಯವರ ನಾಮವನ್ನು ಚೆನ್ನಾಗಿ ಜಪಿಸಿರಿ. ಆಕೆ ಆನಂದಮಯಿ. ಆಕೆಯ ನಾಮದಲ್ಲಿ ಒಂದು ವಿಶೇಷ ಗುಣವಿದೆ. ಸ್ತ್ರೀಜಾತಿಯನ್ನು ಕೆಟ್ಟ ದೃಷ್ಟಿಯಿಂದ ನೋಡುವುದನ್ನು ಶ್ರೀಮಾತೆಯವರು ತಪ್ಪಿಸುತ್ತಾರೆ. ಇದನ್ನು ನಾನು ಬಹಳಷ್ಟು ಜನರ ಅನುಭವದಿಂದ ಹೇಳುತ್ತಿದ್ದೇನೆ. ಅವರ ದಿವ್ಯನಾಮವನ್ನು ಹೇಳುವುದರಿಂದ ಭಕ್ತಿ, ವಿಶ್ವಾಸ, ಶ್ರದ್ಧೆ, ಬುದ್ಧಿ, ಧನ, ಸಮೃದ್ಧಿ ಎಲ್ಲವೂ ಸಿದ್ಧಿಸುತ್ತವೆ. ಆಕೆ ಋದ್ಧಿ, ಸಿದ್ಧಿ ಎಲ್ಲವನ್ನೂ ದಯಪಾಲಿಸುತ್ತಾಳೆ ಎಂದು ಚಂಡಿಯಲ್ಲಿದೆ. ನಾನಂತೂ ಶ್ರೀರಾಮಕೃಷ್ಣರ ನಾಮವನ್ನು ಜಪಿಸುವುದಕ್ಕಿಂತ ಹೆಚ್ಚಾಗಿ ಶ್ರೀಮಾತೆಯವರ ನಾಮಜಪದಿಂದ ಹೆಚ್ಚು ಶಕ್ತಿಯನ್ನು ಪಡೆಯುತ್ತೇನೆ."

ಇನ್ನೊಮ್ಮೆ ಅವರು ಹೇಳಿದರು : "ಶ್ರೀರಾಮಕೃಷ್ಣರಲ್ಲಿ ಹಾಗೂ ಮಾತೆಯವರಲ್ಲಿ ಇರುವ ದಿವ್ಯಶಕ್ತಿಯ ಮುಂದೆ ಕಾಮಕ್ರೋಧ ಮುಂತಾದ ಹೀನಗುಣಗಳೆಲ್ಲ ಪಲಾಯನ ಮಾಡುತ್ತವೆ. ಆದ್ದರಿಂದ ನಾವು ಅವರೀರ್ವರ ಸ್ಮರಣೆಯನ್ನು ಮಾಡಬೇಕು. ಶಕ್ತಿಪೂಜೆಯನ್ನು ಮಾಡುವುದು ಬಹು ಕಷ್ಟದ ಕೆಲಸ. ಶ್ರೀಮಾತೆ ಹಾಗೂ ಶ್ರೀಗುರುಮಹಾರಾಜರ ಕೃಪೆಯಿಂದ ನಮ್ಮ ಸಾಧುಗಳು ಶಕ್ತಿಪೂಜೆಯಲ್ಲಿ ಸಿದ್ಧಿಯನ್ನು ಪಡೆಯುತ್ತಿದ್ದಾರೆ." "ಶ್ರೀರಾಮಕೃಷ್ಣರು ಚೈತನ್ಯಸ್ವರೂಪರು, ಶ್ರೀಮಾತೆ ಚಿಂತಾಮಣಿ ಸ್ವರೂಪಿಣಿ. ಶ್ರೀಮಾತೆ ಸರ್ವಶಕ್ತಿಮಯೀ" ಎನ್ನುತ್ತಿದ್ದರು ವಿಜ್ಞಾನಾನಂದಜಿ. ಅವರಿಗೆ ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆ ಅಭಿನ್ನರಾಗಿದ್ದರು. ಒಮ್ಮೆ ಬ್ರಹ್ಮಚಾರಿ ಅಕ್ಷಯ ಚೈತನ್ಯರಿಗೆ ಹೇಳಿದರು, "ಶ್ರೀಮಾತೆಯವರ ಬಳಿ ಮಂತ್ರದೀಕ್ಷೆ ತೆಗೆದುಕೊಳ್ಳುವುದು ಶ್ರೀರಾಮಕೃಷ್ಣರ ಬಳಿ ಮಂತ್ರ ತೆಗೆದುಕೊಳ್ಳುವುದು, ಎರಡೂ ಒಂದೇ. ಅವರಿಬ್ಬರೂ ಬೇರೆಯಲ್ಲ. ಶ್ರೀಮಾತೆಯವರ ಕೃಪೆಯಿಂದ ಶ್ರೀರಾಮಕೃಷ್ಣರನ್ನು ಅರಿಯುತ್ತೇವೆ ಹಾಗೂ ಶ್ರೀರಾಮಕೃಷ್ಣರ ಕೃಪೆಯಿಂದ ಶ್ರೀಮಾತೆಯವರನ್ನು ಅರಿಯುತ್ತೇವೆ." "ಶ್ರೀಮಾತೆಯವರ ಬಳಿ ಶಕ್ತಿಗಾಗಿ ಪ್ರಾರ್ಥನೆ ಮಾಡಿ. ಶಕ್ತಿಯಿಲ್ಲದೆ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ" ಎಂದು ಬೋಧಿಸುತ್ತಿದ್ದರು. ಓರ್ವ ಭಕ್ತನಿಗೆ ಭಗವಂತನ ದರ್ಶನ ಪಡೆಯುವ ಬಗ್ಗೆ ಒಳ್ಳೆಯ ಸಲಹೆಗಳನ್ನು ಕೊಟ್ಟು ಕೊನೆಗೆ ಹೇಳುತ್ತಾರೆ, "ಸರ್ವಸಂಸ್ಕಾರಗಳನ್ನೂ ಕಿತ್ತು ಆಚೆಗೆ ಎಸೆದು ಕಾಯಾ, ವಾಚಾ, ಮನಸ್ಸುಗಳಿಂದ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ಚರಣಗಳಲ್ಲಿ ಆತ್ಮಸಮರ್ಪಣೆ ಮಾಡಿಕೊಂಡರೆ ಅದೇ ನಿಜವಾದ ಸನ್ಯಾಸ!"

**(ಮುಂದುವರಿಯುವುದು)**

> ನಾನು ದುಷ್ಟರಿಗೂ ತಾಯಿ, ಗುಣವಂತರಿಗೂ ತಾಯಿ;
> ಹೆದರಬೇಡ; ಕಷ್ಟದಲ್ಲಿದ್ದಾಗಲೆಲ್ಲ
> ನಿನ್ನಷ್ಟಕ್ಕೆ ಹೇಳಿಕೋ,
> 'ನನಗೊಬ್ಬಳು ತಾಯಿ ಇದ್ದಾಳೆ' ಎಂದು.
> –ಶ್ರೀಮಾತೆ ಶಾರದಾದೇವಿ